ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ: ಸೆಸ್ಕ್/ತರಬೇತಿ/03/26/2022-23 / 10213-14 ದಿನಾಂಕ: 12 AUG 2022

## ಅಧಿಕೃತ ಜ್ಞಾಪನಾ ಪತ್ರ

ವಿಷಯ : ಪವರ್‌ಮ್ಯಾನ್ ಹಾಗೂ ಸಮನಾಂತರ ಹುದ್ದೆಯ ನೌಕರರ ತಂಡ-4 ಮತ್ತು ಮಾಪಗ ಓದುಗ ಹಾಗೂ ಸಮನಾಂತರ ಹುದ್ದೆಯ ನೌಕರರ ತಂಡ-2ರ ಪದೋನ್ನತಿ ಪೂರ್ವ ತರಬೇತಿಯ ಅಂತಿಮ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ನಡೆಸುವ ಬಗ್ಗೆ.

ಉಲ್ಲೇಖ :
1. ಪವರ್‌ಮ್ಯಾನ್ ಹಾಗೂ ಸಮನಾಂತರ ಹುದ್ದೆಯ ನೌಕರರಿಗೆ ಪದೋನ್ನತಿ ಪೂರ್ವ (PM to MR) ತರಬೇತಿಯನ್ನು ತಂಡ-4ರಲ್ಲಿ ನಡೆಸಲು ಹೊರಡಿಸಲಾದ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸೆಸ್ಕ್/ತರಬೇತಿ/03/27/2022-23/CYS-276 ದಿನಾಂಕ: 27.05.2022.
2. ತಂಡ-4ರಲ್ಲಿ ಪದೋನ್ನತಿ ಪೂರ್ವ ತರಬೇತಿಯನ್ನು ಪಡೆಯಲು ನೌಕರರನ್ನು ಸೇರ್ಪಡೆಗೊಳಿಸಲು ಹೊರಡಿಸಲಾದ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸೆಸ್ಕ್/ತರಬೇತಿ/03/27/2022-23/4789 ದಿನಾಂಕ: 01.06.2022.
3. ಮಾಪಕ ಓದುಗ ಹಾಗೂ ಸಮನಾಂತರ ಹುದ್ದೆಯ ನೌಕರರಿಗೆ ಪದೋನ್ನತಿ ಪೂರ್ವ (MR to JE) ತರಬೇತಿಯನ್ನು ತಂಡ-2ರಲ್ಲಿ ನಡೆಸಲು ಹೊರಡಿಸಲಾದ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸೆಸ್ಕ್/ತರಬೇತಿ/03/26/2022-23/CYS-275 ದಿನಾಂಕ: 27.05.2022.
4. ತಂಡ-2ರಲ್ಲಿ ಪದೋನ್ನತಿ ಪೂರ್ವ ತರಬೇತಿಯನ್ನು ಪಡೆಯಲು ನೌಕರರನ್ನು ಸೇರ್ಪಡೆಗೊಳಿಸಲು ಹೊರಡಿಸಲಾದ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸೆಸ್ಕ್/ತರಬೇತಿ/03/26/2022-23/4790 ದಿನಾಂಕ: 01.06.2022.

***********

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಕಂಪನಿಯ ವಿವಿಧ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪವರ್‌ಮ್ಯಾನ್ ಹಾಗೂ ಸಮನಾಂತರ ಹುದ್ದೆಯ 50 ಮಂದಿ ನೌಕರರಿಗೆ ಹಾಗೂ ಮಾಪಗ ಓದುಗ ಹಾಗೂ ಸಮನಾಂತರ ಹುದ್ದೆಯ 49 ಮಂದಿ ನೌಕರರಿಗೆ 40 ಕೆಲಸದ ದಿನಗಳ ಪದೋನ್ನತಿ ಪೂರ್ವ ತರಬೇತಿಯನ್ನು KEBEA ರವರ ಸಹಯೋಗದೊಂದಿಗೆ KEBEA ತರಬೇತಿ ಕೇಂದ್ರ, ಕಡಕೊಳ, ಮೈಸೂರಿನಲ್ಲಿ ದಿನಾಂಕ 01.06.2022 ರಿಂದ 16.07.2022 ವರೆಗೆ (40 ಕೆಲಸದ ದಿನಗಳು) ನಡೆಸಿ, ಅಂತಿಮ ಪರೀಕ್ಷೆಯನ್ನು ದಿನಾಂಕ : 16.07.2022 ರಂದು ನೀಡಿ ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

ಸದರಿ ತರಬೇತಿಗಳ ಅಂತಿಮ ಪರೀಕ್ಷೆಯ ಉತ್ತರಪತ್ರಿಕೆಗಳ ಮೌಲ್ಯಮಾಪನವನ್ನು ದಿನಾಂಕ : 16.08.2022ರಂದು ಚಾವಿಸನಿನಿ ನಿಗಮ ಕಾರ್ಯಾಲಯದಲ್ಲಿ ನಡೆಸುವ ಸಂಬಂಧ ಉಲ್ಲೇಖಿತ ತರಬೇತಿ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುವಂತಹ ಚಾವಿಸನಿನಿಯ ಈ ಕೆಳಕಂಡ ನಿವೃತ್ತ ಅಧಿಕಾರಿಗಳನ್ನು ನೇಮಿಸಲಾಗಿದೆ.

ಸದರಿ ನಿವೃತ್ತ ಅಧಿಕಾರಿಗಳು ದಿನಾಂಕ : 16.08.2022ರಂದು ನಿಗಮ ಕಛೇರಿಯಲ್ಲಿ ಹಾಜರಿದ್ದು, ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ನಡೆಸಿಕೊಡಲು ಕೋರಲಾಗಿದೆ.

| ಕ್ರಸಂ. | ಹೆಸರು – ಶ್ರೀಯುತ | KEBEA ಉಪನ್ಯಾಸಕರ ಪದನಾಮ |
|---|---|---|
| 1 | ಮೋಹನ್‌ಶಂಕರ್ .ಹೆಚ್.ಸಿ. | ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ |
| 2 | ಹೆಚ್.ಎಲ್. ಬಾಬು | ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ |
| 3 | ಚನ್ನವೀರಯ್ಯ | ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ |
| 4 | ಸೋಮಶೇಖರ್ | ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ |
| 5 | ಪುರುಷೋತ್ತಮ್ ರಾವ್ | ನಿವೃತ್ತ ಉಪಲೆಕ್ಕ ನಿಯಂತ್ರಣಾಧಿಕಾರಿ |
| 6 | ಬಸವರಾಜು | ನಿವೃತ್ತ ಉಪಲೆಕ್ಕ ನಿಯಂತ್ರಣಾಧಿಕಾರಿ |

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾವಿಸನಿನಿ, ಮೈಸೂರು.

ಪ್ರತಿಗಳು:

- ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮುಖ್ಯ ಆರ್ಥಿಕ ಅಧಿಕಾರಿರವರ ಆಪ್ತ ಕಾರ್ಯದರ್ಶಿಯವರಿಗೆ ಅಧಿಕೃತ ಜ್ಞಾಪನಾ ಪತ್ರವನ್ನು ಕಳುಹಿಸುತ್ತಾ, ಸದರಿ ಪತ್ರದಲ್ಲಿನ ಅಂಶಗಳನ್ನು ಮಾನ್ಯ ವ್ಯ.ನಿ/ನಿ(ತಾಂ)/ಮು.ಆ.ಅ ರವರ ಗಮನಕ್ಕೆ ತರಲು ಕೋರಿದೆ.
- ಉಪ್ರವ್ಯ, MIS ಶಾಖೆ, ನಿಗಮ ಕಾರ್ಯಾಲಯ, ಮೈಸೂರು ರವರ ಮಾಹಿತಿಗಾಗಿ ಹಾಗೂ ನಿಗಮದ Website ನಲ್ಲಿ (Upload) ಪ್ರಕಟಣೆಗಾಗಿ.
- ವಲಯ ಕಾರ್ಯದರ್ಶಿಯವರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರ್‌ಗಳ ಸಂಘ, ಕಡಕೊಳ, ಮೈಸೂರುರವರ ಮಾಹಿತಿಗಾಗಿ ಹಾಗೂ ನೇಮಿಸಿರುವ ಅಧಿಕಾರಿಗಳನ್ನು ದಿನಾಂಕ : 16.08.2022ರಂದು ಚಾವಿಸನಿನಿ ನಿಗಮ ಕಾರ್ಯಾಲಯಕ್ಕೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಕೋರಿ.
- ಉಪಾಧ್ಯಕ್ಷರು, ಕವಿಪ್ರನಿನಿ (659) ಎಂ.ಪಿ.ಎಲ್. ಆವರಣ ಶ್ರೀಹರ್ಷ ರಸ್ತೆ, ಮೈಸೂರು ರವರ ಮಾಹಿತಿಗಾಗಿ.
- ಮುಖ್ಯ ಗುಮಾಸ್ತರ ಮಾಹಿತಿಗಾಗಿ ಹಾಗೂ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು.
- ಕಛೇರಿ ಪ್ರತಿ/ಮು.ಕ